**ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ-ಬಾಗಲೂರು ಸ್ನಾತಕೋತ್ತರ ಕೇಂದ್ರದ ಉದ್ಘಾಟನೆ - 23-12-2025**





*ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಖಾಯಂ ಹುದ್ದೆಗಳ ಶೀಘ್ರ ಭರ್ತಿಗೆ ಕ್ರಮ- ಸಚಿವ ಡಾ.ಎಂ.ಸಿ.ಸುಧಾಕರ್

ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವ ವಿದ್ಯಾಲಯಗಳಲ್ಲಿನ ಖಾಯಂ ಬೋಧಕ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡುವ ಜೊತೆಗೆ ಅಗತ್ಯ ಮೂಲಸೌಕರ್ಯ ಒದಗಿಸುವುದಾಗಿ ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.ಸಿ.ಸುಧಾಕರ್ ಪ್ರಕಟಿಸಿದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಾಗಲೂರಿನಲ್ಲಿ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನೂತನ ಸ್ನಾತಕೋತ್ತರ ಕೇಂದ್ರವನ್ನು ಅವರು ವಿಧ್ಯುಕ್ತವಾಗಿ ಉದ್ಘಾಟಿಸಿದರು.

ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಅವರು ಶಿಲಾಫಲಕವನ್ನು ಅನಾವರಣಗೊಳಿಸಿ ಶುಭ ಹಾರೈಸಿದರು. ಉನ್ನತ ಶಿಕ್ಷಣದ ಸೌಲಭ್ಯ ವಿಸ್ತರಣೆಯ ಜೊತೆಗೆ ಗುಣಮಟ್ಟದ ಬಗ್ಗೆಯೂ ಅಗತ್ಯ ಗಮನ ಹರಿಸಬೇಕೆಂದು ಸೂಚಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ

ಬ್ಯಾಟರಾಯನಪುರ ಕ್ಷೇತ್ರದ ಶಾಸಕರೂ ಆದ ಕಂದಾಯ ಸಚಿವ ಕೃಷ್ಣ ಭೈರೇಗೌಡರು ನೂತನ ಸ್ನಾತಕೋತ್ತರ ಕೇಂದ್ರಕ್ಕೆ ಅಗತ್ಯವಿರುವ ಭೂಮಿ ಒದಗಿಸುವ ಭರವಸೆಯಿತ್ತರು.ಅಲ್ಲದೆ ಸಾರ್ವಜನಿಕ ಆಸ್ಪತ್ರೆ ಮತ್ತು ಕ್ರೀಡಾಂಗಣ ನಿರ್ಮಾಣಕ್ಕೂ ತ್ವರಿತ ಗಮನ ಹರಿಸುವುದಾಗಿ ಅವರು ತಿಳಿಸಿದರು.

ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಪ್ರಾಸ್ತಾವಿಕವಾಗಿ ಮಾತನಾಡಿ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಈ ಸ್ನಾತಕೋತ್ತರ ಕೇಂದ್ರ ಮಹತ್ವದ ಹೆಜ್ಜೆಯಾಗಿದೆ ಎಂದು ಬಣ್ಣಿಸಿದರು.

ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸ್ನಾತಕೋತ್ತರ ಕೇಂದ್ರದಲ್ಲಿ ಪ್ರವೇಶ ಪಡೆದು ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಅವರು ಮನವಿ ಮಾಡಿದರು. ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ ಅವಕಾಶ ಸೃಷ್ಟಿಗೆ ವಿಶ್ವವಿದ್ಯಾನಿಲಯ ಒತ್ತು ನೀಡುತ್ತಿರುವುದಾಗಿ ಅವರು ವಿವರಿಸಿದರು.

ವಿಶ್ವವಿದ್ಯಾನಿಲಯದ ಕುಲಸಚಿವರಾದ ಎ. ನವೀನ್ ಜೋಸೆಫ್, ರಮೇಶ್.ಬಿ. ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ. ವಿಜಯಲಕ್ಷ್ಮಿ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಪ್ರೊ.ರಿತಿಕಾ ಸಿನ್ಹಾ, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಹಾಗೂ ಬಾಗಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎ.ಕೆಂಪೇಗೌಡರು ಉಪಸ್ಥಿತರಿದ್ದರು.

Inauguration of Dr. Manmohan Singh Bengaluru City University – Bagalur Postgraduate Centre

Steps to be taken for early filling of permanent posts in public universities – Minister Dr. M.C. Sudhakar

Minister for Higher Education Dr. M.C. Sudhakar announced that the government will soon fill all permanent teaching and non-teaching staff vacancies in public universities across the state, along with providing the necessary infrastructure.

He formally inaugurated the new Postgraduate Centre of Dr. Manmohan Singh Bengaluru City University at Bagalur, under the Byatarayanapura Assembly constituency. In the event held on the premises of the Government Pre-University College, he unveiled the foundation plaque and extended his best wishes.

He emphasized that along with expanding access to higher education, due attention must be given to maintaining quality.

Presiding over the programme, Revenue Minister and Byatarayanapura MLA Krishna Byre Gowda assured that land required for the new Postgraduate Centre would be provided.

He also stated that prompt attention would be given to the construction of a public hospital and a sports complex.

Vice-Chancellor of the University, Prof. Ramesh B., in his introductory address, said that the Postgraduate Centre is an important step towards providing high-quality higher education at low cost to students from poor and middle-class backgrounds.

He appealed to a large number of students to enroll in the Postgraduate Centre and make good use of the opportunity. He also explained that the university is giving priority to skill development and the creation of employment opportunities.

University Registrar A. Naveen Joseph, Ramesh B. Kudenatti, Finance Officer M.V. Vijayalakshmi, Director of the Postgraduate Centre Prof. Ritika Sinha, members of the Syndicate and Academic Council, and Bagalur Gram Panchayat President A. Kempegowda were present at the programme.






ದಿನಾಂಕ : 23
ಸ್ನಾತಕೋತ್ತರ ಕೇಂದ್ರದ ಉದ್ಘಾಟನ








ಸ್ನಾತಕೋತ್ತರ ಕೇಂದ್ರ, ಬಾಗಲೂರು.
ಉದ್ಘಾಟನಾ ಸಮಾರಂಭ
ದಿನಾಂಕ: 23-12-2025
ಉದ್ಘಾಟನೆ
ಡಾ. ಎಂ.ಸಿ. ಸುಧಾಕರ್
ಮಾನ್ಯ ಉನ್ನತ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ
ಅಧ್ಯಕ್ಷತೆ
ಶ್ರೀ. ಕೃಷ್ಣ ಬೈರೇಗೌಡ
ಮಾನ್ಯ ಕಂದಾಯ ಸಚಿವರು
ಕರ್ನಾಟಕ ಸರ್ಕಾರ
ಘನಉಪಸ್ಥಿತಿ
ಪ್ರೊ. ರಮೇಶ್. ಬಿ
ಮಾನ್ಯ ಕುಲಪತಿಗಳು
ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಉಪಸ್ಥಿತಿ


ಡಾ. ಮನಮೋಹನ್ ಸಿಂಗ್
DR. MANMOHAN SINGH
BENGALURU CITY UNIVERSITY
BE BOUNDLESS

